# ಕೋಲ್ಡ್ ಶೋಲ್ಡರ್ ಕಾಲ..



**ಸುಮಾರು 90ರ ದಶಕದಲ್ಲಿ ಕಾಣಿಸಿಕೊಂಡಿದ್ದ 'ಕೋಲ್ಡ್ ಶೋಲ್ಡರ್' ಈಗ ಮತ್ತೆ ಫ್ಯಾಷನ್ ಆಗಿದೆ. ಪಾಶ್ಚಾತ್ಯ ಮಾತ್ರವಲ್ಲ, ಸಾಂಪ್ರದಾಯಿಕ ದಿರಿಸಿನಲ್ಲೂ ಈ ಅರೆ ಹರಿದ ತೋಳಿನದ್ದೇ ಹವಾ. ಅಂಥದ್ದೇನಿದೆ ಈ ತೋಳಿನ ಟ್ರೆಂಡ್‌ನಲ್ಲಿ?**

■ **ಸುಮಲತಾ ಎನ್.**

ಜೀನ್ಸ್, ಮಿನಿ ಸ್ಕರ್ಟ್, ಲಾಂಗ್ ಸ್ಕರ್ಟ್, ಪಲಾಜೊ, ಲೆಹೆಂಗಾ, ಕ್ರಾಪ್ ಟಾಪ್ ಅಷ್ಟೇ ಏಕೆ, ಸೀರೆಗೂ ಈ ಕೋಲ್ಡ್ ಶೋಲ್ಡರ್ ಟಾಪ್‌ಗಳೇ ಜೊತೆಯಾಗಿವೆ. ಇತ್ತೀಚೆಗೆ ಭಾರೀ ಸುದ್ದಿ ಮಾಡಿರುವ ಫ್ಯಾಷನ್ ಟ್ರೆಂಡ್ ಪೈಕಿ ಕೋಲ್ಡ್ ಶೋಲ್ಡರ್‌ನದ್ದೇ ಹೆಚ್ಚು ಪಾಲು.

ಇದೇನಿದು ಕೋಲ್ಡ್ ಶೋಲ್ಡರ್? ಪದದ ಅರ್ಥ ನೋಡುವುದಾದರೆ, 'ನಿರ್ಲಕ್ಷ್ಯಿಸುವುದು' ಎನ್ನಬಹುದು. ಆದರೆ ಫ್ಯಾಷನ್ ಲೋಕದಲ್ಲಿ ಮಾತ್ರ ಇದರ ವ್ಯಾಖ್ಯಾನ ಬೇರೆಯೇ. ಅರೆ ತೆರೆದ ಭುಜದ ತೋಳೇ ಕೋಲ್ಡ್ ಶೋಲ್ಡರ್. ಭುಜದ ಬಳಿ ಮಾತ್ರ ಸ್ವಲ್ಪ ತೆರೆದ ತೋಳಿನ ವಿನ್ಯಾಸವನ್ನೇ ಕೋಲ್ಡ್ ಶೋಲ್ಡರ್ ಎನ್ನುವುದು. ಭುಜಗಳನ್ನು ಶೋ ಆಫ್ ಮಾಡುವ ಈ ಟ್ರೆಂಡ್‌ಗೆ ವಯಸ್ಸಿನ ಹಂಗೂ ಇಲ್ಲ.

ಇದಕ್ಕೆ ಕಟ್ ಔಟ್ ಶೋಲ್ಡರ್ ಎಂದೂ ಕರೆಯುತ್ತಾರೆ. ತೋಳಿನ ಬಳಿ ಮಾತ್ರ ಕತ್ತರಿಸಿರುವುದರಿಂದ ಈ ಹೆಸರು. ಚರ್ಮ ಅರೆ ಇಣುಕಿದಂತೆ ಕಾಣುವುದರಿಂದ ಇದಕ್ಕೆ 'ಪೀಕ್ ಎ ಬೂ ಸ್ಲೀವ್' ಎಂದು ಕರೆಯುವುದುಂಟು.

ಅಂದ ಹಾಗೆ ಈ ತೋಳಿನ ಕಥೆ ನಿನ್ನೆ ಮೊನ್ನೆಯದಲ್ಲ. 1930ರಲ್ಲೇ ಈ ಶೈಲಿ ಇತ್ತು. ಜರ್ಮನ್ ನಟಿ ಹಾಗೂ ಗಾಯಕಿ ಮರ್ಲೀನ್ ಡೀಟ್ರಿಚ್ 1934ರಲ್ಲೇ ಈ ಸ್ಲೀವ್ ಇರುವ ಬಟ್ಟೆ ತೊಟ್ಟು ಟ್ರೆಂಡ್ ಹುಟ್ಟುಹಾಕಿದ್ದರಂತೆ. ಆಗ ಇದಕ್ಕಿಂತ ಹೆಚ್ಚು ಪ್ರಚಾರದಲ್ಲಿದ್ದದ್ದು ಆಫ್ ಶೋಲ್ಡರ್‌ಗಳು. ಮೇಲಂಗಿಯ ಕುತ್ತಿಗೆ ಭಾಗ ಹಾಗೂ ಭುಜದ ಭಾಗ ತೆರೆದಂತಿದ್ದು, ಅದಕ್ಕೆ ಹೊಂದಿಕೊಂಡಂತೆ ತೋಳುಗಳು ಜೋತುಬೀಳುವ ಶೈಲಿಯೇ ಆಗ ಎಲ್ಲಾ ಸಿನಿಮಾ ತಾರೆಯರ ವಾರ್‌ಡ್ರೋಬ್ ಸೇರಿತ್ತು. ಮತ್ತೆ ಅದು ಫ್ಯಾಷನ್‌ನಿಂದ ಹೊರಹೋಗಿತ್ತು. 1993ರಲ್ಲಿ ಅಮೆರಿಕದ ಹಿಲರಿ ಕ್ಲಿಂಟನ್, ತುಂಬು ತೋಳಿನಲ್ಲಿ ಕೋಲ್ಡ್ ಶೋಲ್ಡರ್‌ನ ಕಪ್ಪು ಜೆರ್ಸಿ ತೊಟ್ಟು, ಸಂದರ್ಶನವೊಂದರಲ್ಲಿ ಕಾಣಿಸಿಕೊಂಡಾಗ ಮತ್ತೆ ಪ್ರಚಾರಕ್ಕೆ ಬಂತು. ಅದೇನೂ ಹೆಚ್ಚು ಕಾಲ ಉಳಿಯಲಿಲ್ಲ.

ಇದು ಮತ್ತೆ ಮುನ್ನೆಲೆಗೆ ಬಂದು ಬರೋಬ್ಬರಿ 20 ವರ್ಷವಾಗಿದೆ. 2013ರಲ್ಲಿ ಅಮೆರಿಕದ ಪ್ರಖ್ಯಾತ ವಸ್ತ್ರ ವಿನ್ಯಾಸಕಿ ಡೋನಾ ಕರನ್ ಈ ತೋಳಿನ ಬಟ್ಟೆ ತೊಟ್ಟಾಗ ಅದಕ್ಕೆ ಮತ್ತೆ ಜೀವ ಬಂದದ್ದು. ಎಲ್ಲಾ ವಸ್ತ್ರವಿನ್ಯಾಸಕರ, ಮಾಡೆಲ್‌ಗಳ ಚಿತ್ತ ಇದನ್ನು ಬಿಟ್ಟು ಕದಲಲೇ